ಶ್ರೀ ಬಿ. ಎಚ್. ಯಂಕಾನಾಯಕ್ — ಮಾನ್ಯ ಅಧ್ಯಕ್ಷರೇ, ಹರಪನಹಳ್ಳಿಯಲ್ಲಿ ೫೦ ಹಾಸಿಗೆಗಳ ಆಸ್ಪತ್ರೆಯನ್ನು ಸ್ಥಾಪಿಸುವ ಬಗ್ಗೆ ಹಿಂದೆ ಇದ್ದಂಥ ಆರೋಗ್ಯ ಸಚಿವರು ಒಪ್ಪಿಕೊಂಡಿದ್ದರು. ಮಾನ್ಯ ಮಾಜಿ ಮಂತ್ರಿಗಳಾದ ಪ್ರಕಾಶ್‌ರವರೂ ಕೂಡ ಒತ್ತಾಯ ಮಾಡಿ ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದರು. ಪುರಸಭೆಯ ಅಧ್ಯಕ್ಷರು ಆಮರಣ ಉಪವಾಸ ಕುಳಿತಾಗ ಇದೇ ಮನೆಯಲ್ಲಿ ಮುಂದಿನ ಬಡ್ಜೆಟ್‌ನಲ್ಲಿ ಸೇರಿಸುವುದಾಗಿ ಸನ್ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್‌ರವರು ಮತ್ತು ಮುಖ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಈಗ ಹರಪನಹಳ್ಳಿಯಿಂದ ೬೦ ಕಿಲೋಮೀಟರ್ ದೂರದಲ್ಲಿರುವಂಥ ಹೊಸಪೇಟೆಗಾಗಲಿ ಅಥವಾ ದಾವಣಗೆರೆಗಾಗಲಿ ಗರ್ಭಿಣಿಸ್ತ್ರೀಯರು ಮತ್ತು ಆಕಸ್ಮಿಕ ಅಪಘಾತಕ್ಕೆ ಒಳಗಾದವರೂ ಹೋಗಬೇಕಾಗಿರುತ್ತದೆ. ಆದ್ದರಿಂದ ದಯವಿಟ್ಟು ಈ ವರ್ಷ ವಾದರೂ ಆಸ್ಪತ್ರೆಯನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಪಡಿಸಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ. ಮಾನ್ಯ ಅಧ್ಯಕ್ಷರೇ, ಈಗಾಗಲೇ ತಮಗೆ ತಿಳಿಸಿದ ಪ್ರಕಾರ ಳಿ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ೩೦-೫೦ ಹಾಸಿಗೆಗಳ ಮೇಲ್‌ದರ್ಜೆಗೆ ಏರಿಸಬೆ ಕು. ಎಂದು ತೀರ್ಮಾನ ತೆಗೆದುಕೊಂಡಿರುತ್ತೇವೆ. ಈಗ ೪೩ ಆಸ್ಪತ್ರೆಗಳು ಮಾತ್ರ ಉಳಿದಿರುತ್ತವೆ. ಹಣದ ಅನುಕೂಲತೆಯನ್ನು ನೋಡಿಕೊಂಡು ಹಂತಹಂತವಾಗಿ ಇವೆಲ್ಲವನ್ನು ಮುಗಿಸಿಕೊಡುತ್ತೇವೆಂದು ಹೇಳಿ ದ್ದೇನೆ ಆದ್ಯತೆಯ ಮೇರೆಗೆ ಇವರು ಅರ್ಜಿಯನ್ನು ಹೊಂದಿದ್ದರೆ ಈ ಆಸ್ಪತ್ರೆಯನ್ನು ಮೇಲ್ ದರ್ಜೆಗೆ ಏರಿಸುವುದಕ್ಕೆ ಲಿಕ್ಯಾಚಾರಹಾಕಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ ಎಚ್ ಕಾಯಿಂನಾಯಕ್. ಮಾನ್ಯ ಆಧ ಕ್ಷರೇ. ಈ ಆಸ್ಪತ್ರೆಗಾಗಿ ಜಮೀನನ್ನು ಸಹ ಕೊಟ್ಟಿದ್ದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದರೆ ನಳೆಯೇ ಮಂಜೂರು ಮಾಡ ಬಹುದು. ಸರ್ಕಾರಕ್ಕೆ ಆಗುವುದಿಲ್ಲವೆಂದಲ್ಲ. ದಯವಿಟ್ಟು ಹಣವಿಲ್ಲವೆಂದು ಹೇಳಬೇಡಿ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಆರೋಗ್ಯ ಮಂತ್ರಿಗಳನ್ನು ಇನ್ನು ೩ ತಿಂಗಳು ಅಥವಾ ೬ ತಿಂಗಳಲ್ಲಿಯೇ ಮೇಲ್‌ದರ್ಜೆಯ ಆಸ್ಪತ್ರೆಯನ್ನು ಅಲ್ಲಿಗೆ ಮಂಜೂರು ಮಾಡಿ ಕೊಡುತ್ತಾರೆಯೆ ಎಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಎಚ್ ಟಿ. ಕೃಷ್ಣಪ್ಪ.— ಆದ್ಯತೆಯ ಆಧಾರದಮೇಲೆ ಕೆಲಸ ಕೈಗೊಳ್ಳಬೇಕಾಗಿದೆ. ಆದ್ಯತೆಯನ್ನು ಗುರುತಿಸುವ ಕೆಲಸಮಾಡಿ ಅರ್ಹತೆ ಇದ್ದರೆ ಯಾವ ತಾರತಮ್ಯವೂ ಇಲ್ಲದೆ ಆಸ್ಪತ್ರೆ ಯನ್ನು ಒದಗಿಸಿಕೊಡುತ್ತೇವೆಂದು ಹೇಳುತ್ತೇನೆ.

ಮೂರನೇ ವೇತನ ಆಯೋಗದ ಬಗ್ಗೆ ನೌಕರರ ಅತೃಪ್ತಿ

೨೭೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ನೌಕರರಿಗೆ ಅನ್ವಯಿಸುವಂತೆ ಮೂರನೇ ವೇತನ ಆಯೋಗವು ಕೊಟ್ಟಿರುವ ವರದಿಯ ಬಗ್ಗೆ ಬಹು ಭಾಗ ನೌಕರರಲ್ಲಿ ಅತೃಪ್ತಿ ವ್ಯಕ್ತ ಪಡಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ವರದಿಯ ಅಂಶಗಳನ್ನು ಬದಲಿಸಬೇಕೆಂದು ತಮ್ಮ ಕೇಳಿಕೆಗಳನ್ನು ನಿವೇದಿಸಿ ಪಡಿಸ ಬೇಕೆಂದು ಕೇಳಿರುವ ನೌಕರರ ಸಂಘಗಳೆಷ್ಟು ಹಾಗೂ ನೌಕರರೆಷ್ಟು ?

ಇ) ಸರ್ಕಾರಿ ನೌಕರರಿಗೆ ನ್ಯಾಯ ದೊರಕಲು ವೇತನ ಆಯೋಗದ ವರದಿಯಿಂದ ಉದ್ಭವಿಸಿರುವ ಸಮಸ್ಯೆಗಳನ್ನು ನಿವೇದಿಸಿ ಮಾಡಲು ಸರ್ಕಾರದವರು ಕೈಗೊಳ್ಳುವ ಹಾಗೂ ಕೈಗೊಂಡಿರುವ ಕ್ರಮ ಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ನೌಕರರ ಸಂಘಗಳಿಂದ ... ೨೧೫
ನೌಕರರಿಂದ ... ೧೧,೩೫೦

ಇ) ಈ ವಿಷಯವು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್. — ೧೧,೩೫೦ ನೌಕರರಿಂದ ಅಹವಾಲು ಬಂದಿದೆ ಎಂದು ಹೇಳಿರುತ್ತೀರಿ. ವೈಯಕ್ತಿಕವಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಅಹವಾಲುಗಳನ್ನು ವಿರೋಧಭಾಸವಾಗಿ ಕೊಟ್ಟಿರತಕ್ಕಂಥ ವರದಿಗೆ ಸಂಬಂಧ ಪಟ್ಟಂತೆ ಇದೆಯೇ ? ಅಥವಾ ವೈಯಕ್ತಿಕವಾಗಿ ಇದಿಯೇ ? ಈ ೨೧೫ ಸಂಘಗಳಿಂದ ಎಷ್ಟು ಜನ ನೌಕರರು ಪ್ರತಿನಿಧಿಸಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಮೊದಲನೆಯ ಉಪಪ್ರಶ್ನೆಗೆ ಅನೇಕ ಜನ ನೌಕರರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಕೂಡ ಕೊಟ್ಟಿದ್ದಾರೆ. ತಮಗೆ ಆಗಿರತಕ್ಕಂಥ ತೊಂದರೆಗಳ ಬಗ್ಗೆ ಬರೆದಿದ್ದಾರೆ. ಇದು ಕೇವಲ ಅವರ ತೊಂದರೆಗಳ ಬಗ್ಗೆ ಇರತಕ್ಕಂಥ ರೆಪ್ರೆಸೆಂಟೇಷನ್ ಎಂದು ಹೇಳಿ ಬರೆದಿರತಕ್ಕಂಥದ್ದು ಅವರ ಅಭಿಪ್ರಾಯವಾಗಿದೆ.

ಎರಡನೆಯ ಪ್ರಶ್ನೆಗೆ ನಾನು ಹೇಳಿದಹಾಗೆ ೨೧೫ ಬೇರೆ ಬೇರೆ ಸಂಘಗಳು ಇರುತ್ತವೆ. ಜಿಲೆಗಳಿಂದ ಬಂದಿರತಕ್ಕಂಥದ್ದು, ಬೇರೆ ಬೇರೆ ಇಲಾಖೆಗಳಿಂದ ಪ್ರತ್ಯೇಕವಾಗಿ ಸಂಘಗಳಿಂದ ಬಂದಿರತಕ್ಕಂಥದ್ದು ಇದೆ. ಮತ್ತೆ ಎಷ್ಟು ಸರ್ಕಾರಿ ನೌಕರರುಗಳು ಪ್ರತಿನಿಧಿಸಿದ್ದಾರೆಂದು ಕೇಳಿದರೆ ಅದಕ್ಕೆ ಉತ್ತರವನ್ನು ಕೊಡುವುದು ಕಷ್ಟವಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಎಲ್ಲ ಸರ್ಕಾರಿ ನೌಕರರು ಇದನ್ನು ಪ್ರತಿನಿಧಿಸಿರುತ್ತಾರೆಂದು ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್. — ತಾವು ಮೂರನೆಯ ಪ್ರಶ್ನೆಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಅವರು ಕೊಟ್ಟಿರತಕ್ಕಂಥ ಅನೇಕ ನ್ಯೂನ್ಯತೆಗಳು ಮತ್ತು ಸಮಸ್ಯೆಗಳೂ ಸರ್ಕಾರದ ಪರಿಶೀಲನೆಯಲ್ಲಿದೆ ಎಂದೂ ಹೇಳಿ ಅದರ ಪರಿಹಾರಕ್ಕಾಗಿ ಸರ್ಕಾರದ ಒಂದು ಸಮಿತಿಯನ್ನು ಮಾಡಿದ್ದೇವೆಂದು ಹೇಳಿರುತ್ತೀರಿ. ಮತ್ತೆ ಯಾವಾಗ ಅವರು ತೀರ್ಮಾನ ಕೊಡುತ್ತಾರೆ, ಅವರಿಗೆ ಎಷ್ಟು ಟೈಮ್ ಬೇಕಾಗುತ್ತದೆ. ಹಿಂದೆ ಒಂದುಸಾರಿ ಇಂಥದ್ದೇ ಸಮಿತಿಯನ್ನು ಮಾಡಿದ್ದಾಗ ಅವರು ಎರಡು ವರ್ಷಗಳಕಾಲ ಸಮಯ ತೆಗೆದುಕೊಂಡು ತೀರ್ಮಾನ ಕೊಟ್ಟದ್ದು ಕೂಡ ಇದೆ. ಇದರಿಂದ ಅತ್ಯಪ್ತಿ ಜಾಸ್ತಿಯಾಗಿ ಬೆಳೆಯಲು ಅವಕಾಶವಾಗುತ್ತದೆ. ಆದ್ದರಿಂದ ಒಂದು ನಿರ್ದಿಷ್ಟವಾದ ಟೈಮ್ ಬಗ್ಗೆ ಕೇಳಿರುವ ಪ್ರಶ್ನೆಗೆ ಉತ್ತರವನ್ನೂ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ. —ನನ್ನ ಬಡ್ಜೆಟ್ ಭಾಷಣದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ ಅವರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡುತ್ತೇವೆಂದು ಹೇಳಿದ್ದೇವೆ. ಆ ಕಮಿಟಿ ಇನ್ನೂ ರಚನೆ ಆಗಿಲ್ಲ ಅದು ಆದಷ್ಟು ಬೇಗ ರಚನೆ ಆಗುತ್ತದೆ. ಅವರಿಗೆ ಇಂತಿಷ್ಟು ದಿವಸಗಳಲ್ಲಿ ವರದಿ ಕೊಡಬೇಕೆಂದು ಹೇಳುತ್ತೇವೆ. ೩ ತಿಂಗಳಲ್ಲಿ ಅಥವಾ ೬ ತಿಂಗಳಲ್ಲಿ ಕೊಡಬೇಕೆಂದೂ ಹೇಳುತ್ತೇವೆ. ಹಿಂದಿನ ಕಮಿಟಿ ಮಾಡಿದಾಗಲೂ ಸಮಯ ನಿರ್ಬಂಧವನ್ನು ಹಾಕಿದ್ದು ಉಂಟು. ಆದರೆ ಈ ಕಮಿಟಿ ಮುಂದೆ ಎಷ್ಟು ರೆಪ್ರಸಂಟೇಷನ್ ಬರುತ್ತವೆ, ಎಷ್ಟು ಜನ ಹಾಜರಾಗಿ ಅಭಿಪ್ರಾಯ ಕೊಡಬೇಕೆಂದಿದ್ದಾರೆ. ಅದಕ್ಕೆ ಸಮಯ ಎಷ್ಟು ಬೇಕಾಗುತ್ತದೆಂಬುದನ್ನು ನೋಡಬೇಕಾಗುತ್ತದೆ. ಆದ್ದರಿಂದ ಇಂತಿಷ್ಟೇ ದಿವಸಗಳಲ್ಲಿ ಇತ್ಯರ್ಥ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದಷ್ಟು ಬೇಗ ಮಾಡುತ್ತೇವೆ.

ರಾಜ್ಯಕ್ಕೆ ಮ್ಯಾಕ್‌ಡ್ವೆಲ್ ವಿಸ್ಕಿಯ ಪೂರೈಕೆ

೩೩೫. ಶ್ರೀ ಗೋಪಾಲ ಮಂಕಾಂದ ಕಾನಡೆ (ಸಿರ್ಸಿ) ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮ್ಯಾಕ್‌ಡ್ವೆಲ್ ವಿಸ್ಕೀ (ಮದ್ಯಪಾನ) ಯನ್ನು ನಮ್ಮ ರಾಜ್ಯಕ್ಕೆ ಪೂರೈಸುವವರು ಯಾರು? (ಅವರ ಪೂರ್ಣ ವಿವರ ನೀಡುವುದು)

ಆ) ಯಾವ ಯಾವ ಸ್ಥಳಗಳಿಂದ ಸರಬರಾಜು ಮಾಡಲಾಗುವುದು ?

ಇ) ಮ್ಯಾಕ್‌ಡ್ವೆಲ್ ವಿಸ್ಕೀಯಲ್ಲಿ ಡೂಪ್ಲಿಕೇಟ್ ಸರಬರಾಜು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?